

ಎಲ್ಸಾ ಜೊತೆ ಐನ್‌ಸ್ಟೈನ್

ಸಾಲದೆಂಬಂತೆ ಆಕೆಗೆ ಪ್ರತಿಯೊಂದು ಅಂಶವೂ ಸ್ಪಷ್ಟವಾಗಿದೆ ಎಂಬುದನ್ನು ಖಾತರಿ ಮಾಡಿಕೊಂಡರು. ಆದರೆ ಈ ಒಪ್ಪಂದ ಜಾರಿಗೆ ಬರುವ ಮೊದಲೇ ಮುರಿದುಬಿದ್ದಿತ್ತು.

ಬೇರೆಯಾಗುವುದೊಂದೇ ದಾರಿ ಎನಿಸಿ ಐನ್‌ಸ್ಟೈನ್ ಮತ್ತು ಮಿಲೇವಾ ಒಂದು ಒಪ್ಪಂದಕ್ಕೆ ಬಂದರು. ಅದರ ಪ್ರಕಾರ ಐನ್‌ಸ್ಟೈನ್ ಮಕ್ಕಳ ಪಾಲನೆಯ ಖರ್ಚಿಗೆ 5600 ಮಾರ್ಕುಗಳನ್ನು ಪ್ರತಿವರ್ಷ ನೀಡಲು ಒಪ್ಪಿದರು. ಬೇರೆಯಾಗುವ ಮಾತುಕತೆ ನಡೆದಾಗ ಐನ್‌ಸ್ಟೈನ್ ನೇರವಾಗಿ ಭಾಗವಹಿಸದೆ ತಮ್ಮ ಮಿತ್ರನೊಬ್ಬರನ್ನು ಕಳಿಸಿದರು! ಕಾರಣ ಅವರಿಗೆ ಎಲ್ಸಾ ಜೊತೆ ಸಮಯ ಕಳೆಯುವುದು ಇದಕ್ಕಿಂತ ಮುಖ್ಯ ಎನಿಸಿತು!

1914ರಲ್ಲಿ ಮಿಲೇವಾ ತಮ್ಮ ಮಕ್ಕಳೊಂದಿಗೆ ಜ್ಯೂರಿಚ್‌ಗೆ ಹಿಂದಿರುಗಿದರು. ರೈಲು ನಿಲ್ದಾಣದಲ್ಲಿ ಮಕ್ಕಳನ್ನು ಬೀಳ್ಕೊಡುವಾಗ ಐನ್‌ಸ್ಟೈನ್ ಚಿಕ್ಕ ಮಕ್ಕಳು ಅಳುವಂತೆ ಅತ್ತರು. 'ಈ ಹುಡುಗರನ್ನು ಎಷ್ಟು ಬಾರಿ ಎತ್ತಿಕೊಂಡು ಮುದ್ದಾಡಿ, ಪ್ರಾಮ್‌ನಲ್ಲಿ ಓಡಾಡಿಸಿದ್ದೇನೆ. ನಾನು ಮನೆಗೆ ಬಂದ ತಕ್ಷಣ ಅವರಿಬ್ಬರೂ ಕುಣಿದಾಡುತ್ತಿದ್ದರು. ಅವರಿಗೆ ಇನ್ನು ತಂದೆ ಇಲ್ಲವಾಯಿತು'.

ಮಿಲೇವಾ ದೂರ ಸರಿದಿದ್ದು ಐನ್‌ಸ್ಟೈನ್, ಅವರ ತಾಯಿ ಮತ್ತು ತಂಗಿಯರಿಗೆ ಬಲು ಸಂತೋಷ ತಂದಿತು. ಈಗ ಎಲ್ಸಾ ಮದುವೆಯ ಬೇಡಿಕೆಯನ್ನು ಮುಂದಿಟ್ಟರು.

ಮಗ ಹ್ಯಾನ್ಸ್ ಆಗಾಗ ತಂದೆಗೆ ಪತ್ರ ಬರೆಯುತ್ತಿದ್ದರು. ಮಿಲೇವಾ ಕೂಡ ಪತ್ರ ಬರೆದು ಕಿಡಿಕಾರುತ್ತಿದ್ದರು. ಎಡ್ವರ್ಡನ ಆರೋಗ್ಯ ಕ್ಷೀಣಿಸಿದಾಗ ಐನ್‌ಸ್ಟೈನ್ ಜ್ಯೂರಿಚ್‌ಗೆ ಧಾವಿಸಿ ಅವರನ್ನು ಸ್ಯಾನಿಟೋರಿಯಂ ಒಂದರಲ್ಲಿ ದಾಖಲಿಸಿದರು.

ಆದರೆ ಐನ್‌ಸ್ಟೈನರ ಆರೋಗ್ಯವೇ ಅಧೋಗತಿಗೆ ಇಳಿದಿತ್ತು. ಕೇವಲ ಎರಡು ತಿಂಗಳಿನಲ್ಲಿ 22 ಕಿಲೋ ತೂಕ ಕಳೆದುಕೊಂಡಿದ್ದರು. ಕೂಡಲೇ ಎಲ್ಸಾ, ತಮ್ಮ ಮನೆಗೆ ಹತ್ತಿರದ ಅಪಾರ್ಟ್‌ಮೆಂಟ್ ಒಂದಕ್ಕೆ ವರ್ಗಾಯಿಸಿ ಅವರ ಯೋಗಕ್ಷೇಮದ ಹೊಣೆಹೊತ್ತರು. ಸಿರಿವಂತೆಯಾದ ಆಕೆ ಯುದ್ಧ ಸಮಯದಲ್ಲಿ ವಿರಳವಾದ ಬೆಣ್ಣೆ ಮುಂತಾದ ಪದಾರ್ಥಗಳನ್ನು ಹೇಗೋ ಕೊಂಡು ಅವರಿಗೆ ಒದಗಿಸುತ್ತಿದ್ದರು. ಇಬ್ಬರೂ ಪ್ರತಿದಿನ ಸಂಧಿಸುತ್ತಿದ್ದರು. ಆಗ ಎಲ್ಸಾ ಮತ್ತೆ ಒತ್ತಾಯಿಸಿದರು: ಕೂಡಲೇ ಅವಳನ್ನು ಬಿಟ್ಟು ನನ್ನನ್ನು ಮದುವೆಯಾಗು.

ಐನ್‌ಸ್ಟೈನ್ ವಿಚ್ಛೇದನಕ್ಕೆ ಅರ್ಜಿ ಹಾಕಿದರು. ಮಿಲೇವಾಗೆ ವರ್ಷಕ್ಕೆ 9000 ಮಾರ್ಕುಗಳನ್ನು ಕೊಡುವ ಭರವಸೆ ನೀಡಿದರು. ಆದರೆ ಆಕೆ ಚತುರೆ. ಕೇಳಿದ್ದು ಕೇವಲ ಎರಡನ್ನು: ಒಂದು, ನಿನಗೆ ಮುಂದೆ ಬರಬಹುದಾದ ನೊಬೆಲ್ ಬಹುಮಾನದ ಇಡೀ ಮೊತ್ತವನ್ನು ನನಗೆ ಕೊಡಬೇಕು. ಎರಡು, ನನ್ನ ಹೆಸರು ಮಿಲೇವಾ ಐನ್‌ಸ್ಟೈನ್ ಎಂದೇ ಮುಂದುವರೆಯುವುದಕ್ಕೆ ಅನುಮತಿ ನೀಡಬೇಕು.

ಪ್ರಾಯಶಃ ಇಂತಹ ಷರತ್ತನ್ನು ಯಾವ ಹೆಂಗಸೂ ತನ್ನ ಗಂಡನ ಮೇಲೆ ಹೇರಿಲ್ಲ. ಒಪ್ಪಿಕೊಂಡರು ಐನ್‌ಸ್ಟೈನ್. 1922ರಲ್ಲಿ ಅವರಿಗೆ ನೊಬೆಲ್ ಬಹುಮಾನ ಬಂದಾಗ ಅದರ ಮೊತ್ತವಾದ 121,572 ಕ್ರೋನರ್ (ಸ್ವೀಡನ್ನಿನ ಹಣ) ಅಥವಾ 32,250 ಅಮೆರಿಕನ್ ಡಾಲರ್‌ಗಳನ್ನು ಮಿಲೇವಾ ಹೆಸರಿಗೆ ವರ್ಗಾಯಿಸಲಾಯಿತು. ಇಂದಿನ 600,000 ಅಮೆರಿಕನ್ ಡಾಲರುಗಳಿಗೆ ಸಮವಾದ ಆ ಹಣದಲ್ಲಿ ಆಕೆ ಮೂರು ಮನೆಗಳು ಮತ್ತು ಕೆಲವು ಬಾಡಿಗೆ ಆಸ್ತಿಗಳನ್ನು ಕೊಂಡರು.

ವಕೀಲರ ನಡುವಿನ ವಾದ ವಿವಾದ 1919ರವರೆಗೂ ನಡೆದವು. ಬೇಸತ್ತ ಐನ್‌ಸ್ಟೈನ್, 'ನೋಡಬೇಕು. ಈ ಯುದ್ಧ ಮೊದಲು ಮುಗಿಯುತ್ತದೆಯೋ ಅಥವಾ ಅಷ್ಟರಲ್ಲಿ ನನಗೆ ವಿಚ್ಛೇದನ ದೊರೆಯುತ್ತದೋ!' ಎಂದು ಬೇಸರಿಸಿದರು. ಚರ್ಚೆಯ ಸಮಯದಲ್ಲಿ ಒಬ್ಬ ವಕೀಲ ಐನ್‌ಸ್ಟೈನರನ್ನು ಕೇಳಿದರಂತೆ—'ಒಂದು ಪಕ್ಷ ನಿಮಗೆ ನೊಬೆಲ್ ಬಹುಮಾನ ಬರದೇ ಹೋದರೆ ನೀವು ಮಿಲೇವಾಗೆ ಪರಿಹಾರ ಕೊಡುತ್ತೀರಾ?'

1919ರಲ್ಲಿ ಮಿಲೇವಾರಿಂದ ವಿಚ್ಛೇದನ ದೊರೆತ ನಂತರ ಐನ್‌ಸ್ಟೈನ್ ಎಲ್ಸಾ ಅವರನ್ನು ಮದುವೆಯಾದರು. 'ಸಾಪೇಕ್ಷ ಸಿದ್ಧಾಂತ ಜೀವನಕ್ಕೆ ಅವಶ್ಯವಿಲ್ಲ. ಅಂಗಡಿಯ ರಸೀತಿಯನ್ನು ಅರ್ಥ ಮಾಡಿಕೊಳ್ಳುವಷ್ಟು ಗಣಿತ ಬಂದರೆ ಬೇಕಾದಷ್ಟು' ಎನ್ನುತ್ತಿದ್ದ ಎಲ್ಸಾ ತಮ್ಮ ಗಂಡನನ್ನು ಬಹು ವಿಧೇಯಳಾಗಿ ನೋಡಿಕೊಳ್ಳುತ್ತಿದ್ದರು. ಅವರ ಉಡುಪು, ಆಹಾರ ಎಲ್ಲದರ ಬಗ್ಗೆ ಗಮನವಿಟ್ಟು ಕೊಠಡಿಯನ್ನು ಶುದ್ಧಮಾಡುತ್ತಿದ್ದರು. ಐನ್‌ಸ್ಟೈನ್ ಪ್ರವಾಸಕ್ಕೆ ಹೊರಟಾಗ ಅವರ ಅಗತ್ಯಗಳನ್ನು ಪೆಟ್ಟಿಗೆಯಲ್ಲಿ ಪ್ಯಾಕ್ ಮಾಡುವ ಜವಾಬ್ದಾರಿ ಅವರದ್ದಾಯಿತು. ಜೊತೆಗೆ ಅವರಿಗೆ ಅವಶ್ಯವಾದಷ್ಟು ಹಣವನ್ನು ಅವರ ಜೇಬಿನಲ್ಲಿ ಇಡುತ್ತಿದ್ದರು. ಊಟದ ಸಮಯ ಬಂದಾಗ ಒತ್ತಾಯದಿಂದ ಬಡಿಸುತ್ತಿದ್ದರು. ಕಾರ್ಯಭಾರದ ನಿಮಿತ್ತ ಬರದೇ ಹೋದರೆ ಊಟವೇ ಅವರತ್ತ ಹೋಗುತ್ತಿತ್ತು. 'ವಿಜ್ಞಾನದ ಅಧ್ಯಯನ ಮಾಡಲು ಶತಮಾನಗಳು ಸಾಲದು. ಆದರೆ ನಿನ್ನ ದೇಹ ಅಷ್ಟು ದಿವಸ ಇರುವುದಿಲ್ಲ. ಅದನ್ನು ನೀನು ನೋಡಿಕೊಳ್ಳಬೇಕು' ಎಂದು ಗಂಡನಿಗೆ ಎಚ್ಚರಿಕೆ ನೀಡುತ್ತಿದ್ದರು. ಅವರಿಗೆ ಜರ್ಮನ್ ಅಲ್ಲದೆ ಮಿಕ್ಕ ಒಂದೆರಡು ಭಾಷೆಗಳ ಜ್ಞಾನವಿದ್ದು ಗಂಡನಿಗೆ ದುಭಾಷಿಯೂ ಆಗಿದ್ದರು.

ಐನ್‌ಸ್ಟೈನ್ 1933ರಲ್ಲಿ ಅಮೆರಿಕಕ್ಕೆ ವಲಸೆ ಹೋದಾಗ ಎಲ್ಸಾ ಮತ್ತವರ ಇಬ್ಬರು ಹೆಣ್ಣುಮಕ್ಕಳು ಜೊತೆಗೆ ಹೋದರು. ಎಲ್ಸಾ 1936ರಲ್ಲಿ ಅನಾರೋಗ್ಯದಿಂದ ನಿಧನರಾದರು. ಐನ್‌ಸ್ಟೈನ್ ಏಕಾಂಗಿಯಾದರು. ಈ ಸಂದರ್ಭದಲ್ಲಿ ಮಗ ಹ್ಯಾನ್ಸ್ ಕೂಡ ವಲಸೆ ಬಂದರು.

ಅತ್ತ ಮಿಲೇವಾ ಅವರ ಆರೋಗ್ಯ ಹದಗೆಟ್ಟಿತು. ಅವರಿಗೆ ಮಗ ಎಡ್ವರ್ಡನನ್ನು ನೋಡಿಕೊಳ್ಳುವುದು ಅಸಾಧ್ಯ ಎನಿಸಿತು. ಅದಕ್ಕಾಗಿ ತನ್ನ ತಂಗಿಯನ್ನು ಕರೆಸಿಕೊಂಡರು. ಆಕೆಗೆ ಕುಡಿತದ ಚಟ. ಮಿಲೇವಾ ಮನೆಯ ಓವೆನ್‌ನಲ್ಲಿ ಬಚ್ಚಿಟ್ಟಿದ್ದ ಹಣವನ್ನೆಲ್ಲಾ ಸುಟ್ಟುಹಾಕಿ ಅಕ್ಕನ ಸಂಸಾರಕ್ಕೆ ಎರವಾದಳು! ಗಂಡನ ನೊಬೆಲ್ ಬಹುಮಾನದ ಹಣ ತನ್ನ ಮೌಲ್ಯ ಕಳೆದುಕೊಂಡಿತ್ತು, ಕಾರಣ ಹಣದುಬ್ಬರ. ಮಿಲೇವಾ ತನ್ನ ಎರಡು ಅಪಾರ್ಟ್‌ಮೆಂಟ್‌ಗಳನ್ನು ಮಾರಿದರು. ಮಗನ ಪಾಲನೆಗೆ ಈ ಹಣ ಸಾಲಲಿಲ್ಲ. ಆಗ ಐನ್‌ಸ್ಟೈನ್ ಮೂರನೆಯ ಅಪಾರ್ಟ್‌ಮೆಂಟನ್ನೂ ಮಾರಿ ಹಣ ನೀಡಿದರು.

1948ರ ಚಳಿಗಾಲದಲ್ಲಿ ಮಿಲೇವಾ, ರಸ್ತೆಯಲ್ಲಿ ಕಾಲು ಜಾರಿ ಬಿದ್ದದ್ದೇ ಅವರ ಸಾವಿಗೆ ಕಾರಣವಾಯಿತು. ನಂತರ ಅವರ ಅಪಾರ್ಟ್‌ಮೆಂಟನ್ನು ಖಾಲಿ ಮಾಡಿದಾಗ ಜಮಖಾನೆಯ ಕೆಳಗೆ 85,000 ಸ್ವಿಸ್ ಫ್ರಾಂಕುಗಳು ಸಿಕ್ಕವು. ಅದು ಐನ್‌ಸ್ಟೈನ್ ಮೂರನೆಯ ಅಪಾರ್ಟ್‌ಮೆಂಟನ್ನು ಮಾರಿ ನೀಡಿದ್ದ ಹಣ, ಎಡ್ವರ್ಡನ ಪಾಲನೆಗೆ. ಐನ್‌ಸ್ಟೈನ್ 1955ರಲ್ಲಿ ನಿಧನರಾದರೆ, ಎಡ್ವರ್ಡ್ 1965ರಲ್ಲಿ ಅಸುನೀಗಿದರು.

ಚಿತ್ರಕೃಪೆ: ವಿಕಿ ಕಾಮನ್ಸ್

ಪ್ರತಿಕ್ರಿಯಿಸಿ: feedback@sudha.co.in